# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583105

**VIJAYANAGARA SRI KRISHNADEVARAYA UNIVERSITY**

"Jnana Sagara" Campus, Vinayaka Nagara, Contonment, Ballari - 583105

ಪ್ರೊ. ಶಶಿಕಾಂತ ಎಸ್. ಉಡಿಕೇರಿ
ಕುಲಸಚಿವರು (ಮೌಲ್ಯಮಾಪನ)
ದೂರವಾಣಿ : 08392–241011

ಸಂಖ್ಯೆ. ವಿಶ್ರೀಕೃವಿಬ/ಪರೀಕ್ಷಾ/ಬಿ.ಇಡಿ.–ಪ.ಅ/2021–22/531

ದಿನಾಂಕ: 20–09–2021

## ಪರೀಕ್ಷಾ ಅಧಿಸೂಚನೆ

**ವಿಷಯ: ಅಕ್ಟೋಬರ್–2021 ರ ತಿಂಗಳಿನಲ್ಲಿ ಜರುಗಲಿರುವ ಬಿ.ಇಡಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 20–09–2021

****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಅಕ್ಟೋಬರ್–2021 ರ ತಿಂಗಳಿನಲ್ಲಿ ಜರುಗಲಿರುವ 2020–21 ನೇ ಸಾಲಿನ **ಬಿ.ಇಡಿ 1ನೇ ಮತ್ತು 3ನೇ ಷಾಣ್ಮಾಸಿಕಗಳ ( ಕ್ರಮಬದ್ಧ ಹಾಗೂ ಪುನರಾವರ್ತಿತ )** ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಈ ಕೆಳಗಿನಂತಿವೆ.

| **ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕಗಳು** | | |
|---|---|---|
| 1. | ದಂಡ ಶುಲ್ಕ ವಿಲ್ಲದೆ | 20–09–2021 ರಿಂದ 27–09–2021 |
| 2. | ದಂಡ ಶುಲ್ಕ ಪ್ರತಿ ದಿನಕ್ಕೆ ರೂ. 100/– ರಂತೆ | 28–09–2021 ರಿಂದ 30–09–2021 |
| 3. | ದಂಡ ಶುಲ್ಕ ಪ್ರತಿ ದಿನಕ್ಕೆ ರೂ. 500/– ರಂತೆ | 01–10–2021 ರಿಂದ 06–10–2021 |

**: ಪರೀಕ್ಷಾ ಶುಲ್ಕದ ವಿವರಗಳು :**

| ಕ್ರ..ಸಂ. | **ವಿವರಣೆ** | **ಶುಲ್ಕ** |
|---|---|---|
| 1. | ಬಿ.ಇಡಿ. 1ನೇ ಮತ್ತು 3ನೇ ಸೆಮಿಸ್ಟರ್ ( ಕ್ರಮಬದ್ಧ ಹಾಗೂ ಪುನರಾವರ್ತಿತ) | ರೂ.1300.00 |
| 2. | ಅಂಕಪಟ್ಟಿ ಶುಲ್ಕ | ರೂ.150.00 |
| **ಪರೀಕ್ಷೆಗಳ ಪುನರಾವರ್ತಿತ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಬೇಕು.** | | |

ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾದ ಅಭ್ಯರ್ಥಿಗಳು ನಿಯಮಾನುಸಾರ ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು **ಆನ್‌ಲೈನ್ ಮೂಲಕ ಮಾತ್ರ** ಪಾವತಿಸಲು ತಿಳಿಸಲಾಗಿದೆ.

**: ಎಲ್ಲಾ ಪ್ರಾಂಶುಪಾಲರುಗಳು ಹಾಗೂ ವಿದ್ಯಾರ್ಥಿಗಳಿಗೆ ಸೂಚನೆ :**

1. ವಿದ್ಯಾರ್ಥಿಗಳು ಆನ್ ಲೈನ್ (Online) ಮುಖಾಂತರ ಅರ್ಜಿ ಸಲ್ಲಿಸಲು **http://student.logisys.org/vskub/** ನಲ್ಲಿ login ಆಗಿ ನೋಂದಣಿ ಸಂಖ್ಯೆ, ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ **ಷಾಣ್ಮಾಸಿಕವಾರು/ವಿಷಯವಾರು** ಗುರುತು ಮಾಡಿ, ಶುಲ್ಕದ ವಿವರಗಳುಳ್ಳ ಅರ್ಜಿ ಭರಿಸಿ, ಶುಲ್ಕ ಸಂದಾಯಿಸಿದ ನಂತರ ಪ್ರತಿಯನ್ನು ತಕ್ಷಣ ವಿದ್ಯಾರ್ಥಿಗಳು ಮಹಾವಿದ್ಯಾಲಯಗಳಲ್ಲಿ ಸಲ್ಲಿಸಬೇಕು.

2. SC/ST ಹಾಗೂ OBC, ಪ್ರವರ್ಗ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು (ಸರ್ಕಾರಿ ಆದೇಶಗಳನ್ವಯ ವಾರ್ಷಿಕ ಆದಾಯದ ಮಿತಿಗೊಳಪಡುವ ವಿದ್ಯಾರ್ಥಿಗಳು ಅಂಕಪಟ್ಟಿ ಶುಲ್ಕ ರೂ. 150/-ನ್ನು ಮಾತ್ರ ಪಾವತಿಸಬೇಕು.
3. ಮಹಾವಿದ್ಯಾಲಯಗಳಿಂದ ಧೃಡೀಕರಣ ಮತ್ತು ಅನುಮೋದನೆ ಪಡೆದಿರುವ ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಪರವಾನಿಗೆ ಇರುತ್ತದೆ.
4. ಸರ್ಕಾರ ನಿಗದಿಪಡಿಸಿದ ಆದಾಯದ ಮಿತಿಯೊಳಗಿರುವ ಶುಲ್ಕ ವಿನಾಯಿತಿ ಪಡೆದಿರುವ SC/ST ಹಾಗೂ ಇನ್ನುಳಿದ OBC/LIG ವಿದ್ಯಾರ್ಥಿಗಳ ವ್ಯತ್ಯಾಸ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಮಂಜೂರಾತಿ ಪಡೆದ ನಂತರ ಆಯಾ ಮಹಾವಿದ್ಯಾಲಗಳ ಪ್ರಾಂಶುಪಾಲರು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಶುಲ್ಕ ವಿನಾಯಿತಿ ಮೊತ್ತವನ್ನು ಪಾವತಿಸುವಲ್ಲಿ ತಪ್ಪಿದ್ದಲ್ಲಿ ವಿಶ್ವವಿದ್ಯಾಲಯವು ಕೈಗೊಳ್ಳುವ ಕ್ರಮಕ್ಕೆ ಬದ್ಧರಾಗಿರತಕ್ಕದ್ದು.
5. ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ಮಹಾವಿದ್ಯಾಲಯದವರು ಪ್ರತ್ಯೇಕವಾಗಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸತಕ್ಕದ್ದು.
6. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಬಿಟ್ಟು ಬೇರೆ ನೋಂದಣಿ ಸಂಖ್ಯೆ ಅಥವಾ ಬೇರೆ ವಿಷಯಗಳನ್ನು ನಮೂದಿಸಿದರೆ ಅಂತಹ ಪ್ರಕರಣಗಳನ್ನು ವಿಶ್ವವಿದ್ಯಾಲಯವು ಸರಿಪಡಿಸಲಾಗುವುದಿಲ್ಲ.
7. ಪರೀಕ್ಷಾ ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಗಳನ್ನು ಯಾವದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ. ಮತ್ತು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

20.9.21

**ಕುಲಸಚಿವರು (ಮೌಲ್ಯಮಾಪನ)**
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ

**ಗೆ,**

**ಎಲ್ಲಾ ಬಿ.ಇಡಿ.ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ,**

**ಪ್ರತಿಗಳು:**

1) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ
2) ಕುಲಸಚಿವರ ಆಪ್ತ ಸಹಾಯಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
3) ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
4) ಮೇ// ಲಾಜಿಸಿಸ್, ಬೆಂಗಳೂರು, ಶಾಖೆ ವಿ.ಶ್ರೀ.ಕೃ. ವಿಶ್ವವಿದ್ಯಾಲಯ ಆವರಣ, ಬಳ್ಳಾರಿ.
5) ಕಛೇರಿ ಪ್ರತಿ.